**ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಹಾನಗಲ್ಲ.**

**ಸಿ.ಸಿ ನಂಬರ್ಃ 47/2024**

ಪಿರ್ಯಾದಿಃ ಸರ್ಕಾರ, ಪ್ರತಿನಿಧಿಸುವವರು,
ಆಡೂರ ಪೊಲೀಸ್ ಠಾಣಾ ಪೋಲೀಸರು.

ವಿರುದ್ದ

ಆರೋಪಿಃ 1. ಆನಂದಪ್ಪ ಶಿವಪ್ಪ ಹಾನಗಲ್ಲ
ವಃ 45 ವರ್ಷ,ವಾಸಃ ಬಿಂಗಾಪುರ, ತಾಃ ಹಾನಗಲ್ಲ

2. ಮೂಕಪ್ಪ ತಂದೆ ಶಿವಪ್ಪ ಹಾನಗಲ್ಲ
ವಃ 42 ವರ್ಷ, ವಾಸಃ ಬಿಂಗಾಪುರ, ತಾಃ ಹಾನಗಲ್ಲ

**ದೋಷಾರೋಪಣೆ**

ನಾನು ಶ್ರೀ. ಜನಾರ್ಧನ ಎಸ್ ಕೆ, ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಹಾನಗಲ್ಲ, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

1. ಆಡೂರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿನ ಬಿಂಗಾಪುರ ಗ್ರಾಮದಲ್ಲಿ ಪಿರ್ಯಾದುದಾರರು ಮತ್ತು ಆರೋಪಿತರಾದ ನಿಮ್ಮ ಜಮೀನುಗಳು ಅಕ್ಕಪಕ್ಕದಲ್ಲಿ ಇದ್ದು, ದಿನಾಂಕಃ 25-02-2023 ರಂದು ಚಾಸಾ-4 ರವರು ತಮ್ಮ ಹೊಲದಲ್ಲಿಯ ಬೋರಿನಿಂದ ಪೈಪುಗಳನ್ನು ಜೋಡಿಸಿ ತಮ್ಮ ಇನ್ನೊಂದು ಹೊಲಕ್ಕೆ ಹಾಯಿಸುತ್ತಿದ್ದಾಗ, ಸದರಿ ನೀರಿನ ಪೈಪುಗಳು ಕಿತ್ತು ಆರೋಪಿತರಾದ ನಿಮ್ಮ ಹೊಲಕ್ಕೆ ಸ್ವಲ್ಪ ನೀರು ಹೋಗಿದ್ದು, ಅದಕ್ಕೆ ಸಿಟ್ಟಾಗಿ ಆರೋಪಿತರಾದ ನೀವು ದಿಃ 26-02-2023 ರಂದು ಮುಂಜಾನೆ 8-00 ಗಂಟೆಯ ಸುಮಾರಿಗೆ ಚಾಸಾ-4 ರವರು ಹೊಲದಲ್ಲಿ ನೀರು ಹಾಯಿಸುತ್ತಿದ್ದಾಗ, ಆರೋಪಿತರಾದ ನೀವು ಚಾಸಾ-4 ರವರೊಂದಿಗೆ ಜಗಳ ತೆಗೆದು ಕೈಗಳಿಂದ ಹಲ್ಲೆ ಮಾಡಿ ಸಾದಾ ಸ್ವರೂಪದ ನೋವು ಉಂಟು ಮಾಡಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 323 ಸಹಕಲಂ 34 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ?

2. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಸೇರಿಕೊಂಡು, ಆರೋಪಿಗಳಾದ ನೀವು ಚಾಸಾ-4 ರವರಿಗೆ ಬಡಿಗೆಯಿಂದ ಎದೆಗೆ, ಮೈಕ್ಕೆ ಹೊಡೆದು ಸಾದಾ ಸ್ವರೂಪದ ರಕ್ತ ಗಾಯವನ್ನು ಉಂಟು ಮಾಡಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 324 ಸಹಕಲಂ 34 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ?

3. ಮೇಲೆ ಹೇಳಿದ ದಿನಾಂಕ, ವೇಳೆ, ಸ್ಥಳ ಮತ್ತು ಕಾರಣದಿಂದ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಸೇರಿಕೊಂಡು, ಆರೋಪಿತರಾದ ನೀವು ಚಾಸಾ-4 ರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಅವರಿಂದ ಶಾಂತಿ ಭಂಗವನ್ನುಂಟು ಮಾಡಲು ಉದ್ದೇಶಪೂರ್ವಕವಾಗಿ ಪ್ರೇರೆಪಿಸಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 504 ಸಹಕಲಂ 34 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ?

4. ಮೇಲೆ ಹೇಳಿದ ದಿನಾಂಕ ಮತ್ತು ಕಾರಣದಿಂದ ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಸೇರಿಕೊಂಡು, ಚಾಸಾ-4 ರವರಿಗೆ ಜೀವದ ಬೆದರಿಕೆ ಹಾಕಿರುತ್ತೀರಿ. ಈ ರೀತ್ಯ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 506 ಸಹಕಲಂ 34 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ?

ಸದರಿ ಮೇಲೆ ಹೋರಿಸಿದ ದೋಷಾರೋಣೆಯನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿದ್ದರಿಂದ ಅವುಗಳು ಈ ನ್ಯಾಯಾಲಯದಿಂದ ವಿಚಾರಣೆ ಆಗತಕ್ಕದ್ದು ಎಂದು ಆದೇಶ ಮಾಡಿರುತ್ತೇನೆ.

ಪ್ರಃ 1. ಈಗ ಮೇಲೆ ಓದಿ ಹೇಳಿದ ಆರೋಪಗಳು ನಿಮಗೆ ತಿಳಿದಿದೆಯೋ?

ಆರೋಪಿತರ ಉತ್ತರಃ

ಪ್ರಃ 2. ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೊ?

ಆರೋಪಿತರ ಉತ್ತರಃ

(ಆರೋಪಿತರಿಗೆ ದಿನಾಂಕಃ 05-11-2024 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣಿಕರಿಸುತ್ತೇನೆ)

ಹಾನಗಲ್ಲ
ದಿನಾಂಕಃ 05-11-2024

ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ
ನ್ಯಾಯಾಲಯ, ಹಾನಗಲ್ಲ.

1 ನೇ ಆರೋಪಿಯ ಸಹಿ

2 ನೇ ಆರೋಪಿಯ ಸಹಿ